ಸರ್ಕಾರದ ಆದೇಶ ಸಂಖ್ಯೆ: ಸಕಕಾ 65 ಬಿಎಂಎಸ ೯೦ಕ್ಕೆ ಅನುಬಂಧ – ಅ

ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ವಸತಿ ಶಾಲೆಗಳಿಗೆ ವಿದ್ಯಾರ್ಥಿಗಳ ಪ್ರವೇಶ ನಿಯಮಗಳು:

(1) ಈ ವಸತಿ ಶಾಲೆಗಳನ್ನು '' ಗ್ರಾಮೀಣ ಪ್ರತಿಭಾವಂತ ಹಿಂದುಳಿದ ವರ್ಗಗಳ ವಸತಿ ಶಾಲೆಗಳು '' ಎಂದು ಮತ್ತು ಈ ನಿಯಮಗಳನ್ನು '' ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ವಸತಿ ಶಾಲೆಗಳಿಗೆ ವಿದ್ಯಾರ್ಥಿಗಳ ಪ್ರವೇಶ ನಿಯಮಗಳು '' ಎಂದು ಕರೆಯತಕ್ಕದ್ದು.

(2) ಈ ನಿಯಮಗಳು ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ ನಡೆಸುವ ವಸತಿ ಶಾಲೆಗಳಿಗೆ ಸರ್ಕಾರಿ ಆದೇಶದ ಸಂಖ್ಯೆ: ಎಸಡಬ್ಲ್ಯುಎಲ 66 ಬಿಸಿಎ 86 ದಿನಾಂಕ: 13–10–86 ರ ಪ್ರಕಾರ ಹಾಗೂ ಕಾಲಕಾಲಕ್ಕೆ ತಿದ್ದು ಪಡಿಗೆ ಒಳಪಟ್ಟ ಹಿಂದುಳಿದ ವರ್ಗಗಳೆಂದು ವರ್ಗೀಕರಿಸಲಾದ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ ಮಾತ್ರ ಅನ್ವಯಿಸುತ್ತದೆ.

(3) ಈ ನಿಯಮಗಳು ತಕ್ಷಣದಿಂದ ಜಾರಿಗೆ ಬರುತ್ತವೆ.

(4) ವಸತಿ ಶಾಲೆಗಳಲ್ಲಿ ವಿವಿಧ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಪ್ರವೇಶವು ಕೆಳಕಂಡ ಪ್ರಮಾಣದಲ್ಲಿರುತ್ತದೆ.

| | | |
|---|---|---|
| ಎ – ವರ್ಗ | – | ಶೇ. 8 |
| ಬಿ – ವರ್ಗ | – | ಶೇ. 22 |
| ಸಿ – ವರ್ಗ | – | ಶೇ. 24 |
| ಡಿ – ವರ್ಗ | – | ಶೇ. 13 |
| ಇ – ವರ್ಗ | – | ಶೇ. 8 |
| ಪ.ಜಾತಿ | – | ಶೇ. 21 |
| ಪ.ವರ್ಗ | – | ಶೇ. 4 |
| ಒಟ್ಟು | – | ಶೇ. 100 |

ವಸತಿ ಶಾಲೆಗಳಿಗೆ ಪ್ರವೇಶವನ್ನು ಮಂಜೂರಾತಿ ಸಂಖ್ಯೆಗೆ ನಿರ್ಬಂಧಗೊಳಿಸಲಾಗಿದ್ದು ಯಾವುದೇ ನಿರ್ದಿಷ್ಟ ವರ್ಗಗಳಿಂದ ಅಗತ್ಯ ಸಂಖ್ಯೆಯ ವಿದ್ಯಾರ್ಥಿಗಳು ಬಾರದೇ ಇದ್ದಲ್ಲಿ ಖಾಲಿ ಬಿದ್ದ ಸ್ಥಾನಗಳನ್ನು ಮೇಲೆ ಹೇಳಿರುವ ಮೀಸಲಾತಿಯನ್ನು ಅನುಸರಿಸಿ ತುಂಬತಕ್ಕದ್ದು.

(5) <u>ಅರ್ಹತೆ</u>: ಮೇಲೆ ಉಲ್ಲೇಖಿಸಿರುವ ಸರ್ಕಾರಿ ಆದೇಶದ ಪ್ರಕಾರ ಗ್ರಾಮೀಣ ಹಿಂದುಳಿದ ವರ್ಗಗಳಿಗೆ ಸೇರಿದ ಮತ್ತು ಕರ್ನಾಟಕ ಸರ್ಕಾರ ನಡೆಸುತ್ತಿರುವ ಅಥವಾ ಸರ್ಕಾರದಿಂದ ಅಂಗೀಕೃತವಾದ ಶೈಕ್ಷಣಿಕ ಸಂಸ್ಥೆಗಳಲ್ಲಿ ನಾಲ್ಕನೇಯ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದು, ಉತ್ತೀರ್ಣ ಅಭ್ಯರ್ಥಿಗಳ ಮಾತ್ರ ಈ ವಸತಿ ಶಾಲೆಗೆ ಪ್ರವೇಶ ಪಡೆಯಲು ಅರ್ಹರಾಗಿರುತ್ತಾರೆ.

(6) ಈ ವಸತಿಶಾಲೆಗಳಿಗೆ ಪ್ರವೇಶ ನೀಡುವುದಕ್ಕಾಗಿ ಒಂದು ಪ್ರವೇಶ ಆಯ್ಕೆ ಸಮಿತಿ ಕೆಳಕಂಡಂತೆ ಇರುತ್ತದೆ:

(ಅ) ಅಧ್ಯಕ್ಷರು – ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಗಳು (ಡಿ.ಸಿ)
(ಆ) ಸದಸ್ಯರು – ಸಂಬಂಧಪಟ್ಟ ಜಿಲ್ಲೆಯ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು.
(ಇ) ಸದಸ್ಯ ಕಾರ್ಯದರ್ಶಿ – ಸಂಬಂಧಪಟ್ಟ ಜಿಲ್ಲಾ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖಾ ಅಧಿಕಾರಿಗಳು.

ಪ್ರವೇಶ ಸಮಿತಿಯು ವಸತಿಶಾಲೆಗೆ ವಿದ್ಯಾರ್ಥಿಗಳ ಪ್ರವೇಶಕ್ಕೆ ಸಂಬಂಧಿಸಿದಂತೆ ಪ್ರವೇಶ ಪರೀಕ್ಷೆಯ ಕೇಳಬೇಕಾದ ಪ್ರಶ್ನೆ ಪತ್ರಿಕೆಗಳನ್ನು ರಚಿಸುವುದು ಮತ್ತು ಉತ್ತರ ಪತ್ರಿಕೆಗಳ ಮೌಲ್ಯ ಮಾಪನ ಪರೀಕ್ಷಾ ಫಲಿತಾಂಶವನ್ನು ಪ್ರಕಟಿಸುವುದು ಮುಂತಾದ ಪರೀಕ್ಷೆಗೆ ಸಂಬಂಧಿಸಿದ ಎಲ್ಲಾ ಕಾರ್ಯಗಳನ್ನು ನಿರ್ವಹಿಸುವುದು.

(ಈ) ಪ್ರವೇಶ ಪರೀಕ್ಷೆಯನ್ನು ವಸತಿಶಾಲೆ ಇರುವ ಜಿಲ್ಲೆಗಳ ವಿದ್ಯಾ ಇಲಾಖೆಯ ಆಯಾ ಜಿಲ್ಲೆಗಳ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರ ಮೇಲ್ವಿಚಾರಣೆಯಲ್ಲಿ ನಡೆಯತಕ್ಕದ್ದು, ವಸತಿಶಾಲೆಗಳಿಗೆ 10 ವರ್ಷಗಳಿಗೆ ಮೀರಿರುವ ಮತ್ತು 12 ವರ್ಷದ ಒಳಗೆ ಇರುವ ಗ್ರಾಮೀಣ ವಿದ್ಯಾರ್ಥಿಗಳಿಗೆ ಪ್ರವೇಶವನ್ನು ಕೊಡತಕ್ಕದ್ದು. ವಯಸ್ಸನ್ನು ನಿಗಧಿ ಮಾಡುವಾಗ ಆಯಾ ಶೈಕ್ಷಣಿಕ ವರ್ಷದ ಜೂನ್ ಮಾಹೆಯನ್ನು ಗಣನೆಗೆ ತೆಗೆದುಕೊಳ್ಳತಕ್ಕದ್ದು.

(7) ಈ ವಸತಿಶಾಲೆಯಲ್ಲಿ 5ನೇ ತರಗತಿಯಿಂದ 10ನೇ ತರಗತಿಯವರೆಗೆ ತರಗತಿಗಳನ್ನು ನಡೆಸತಕ್ಕದ್ದು. ಪ್ರತಿ ತರಗತಿಯಲ್ಲಿನ ವಿದ್ಯಾರ್ಥಿಗಳ ಗರಿಷ್ಠ ಸಂಖ್ಯೆ 40 ಆಗಿರುತ್ತದೆ. ಪ್ರತಿ ವರ್ಷ 5ನೇ ಮತ್ತು 6ನೇ ತರಗತಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ಪ್ರವೇಶ ಕೊಡತಕ್ಕದ್ದು. ಈ ವಸತಿ ಶಾಲೆಗಳಿಗೆ ಪ್ರವೇಶವನ್ನು ಸ್ಪರ್ಧಾತ್ಮಕ ಪರೀಕ್ಷೆಯ ಮತ್ತು ಮೌಖಿಕ ಪರೀಕ್ಷೆಯ ಮೂಲಕ ಕೊಡತಕ್ಕದ್ದು. ಪ್ರವೇಶ ಪರೀಕ್ಷೆಯನ್ನು ಕನ್ನಡ ಭಾಷೆ, ಗಣಿತ, ತ್ವರಿತ ಬರವಣಿಗೆಯ ಪರೀಕ್ಷೆ, ಸಾಮಾನ್ಯ ಜ್ಞಾನ ಮತ್ತು ಬುದ್ಧಿವಂತಿಕೆಯ ವಿಷಯಗಳ ಮೇಲೆ ನಡೆಸತಕ್ಕದ್ದು. ಸದರಿ ವಿಷಯಗಳ ಪ್ರವೇಶದ ಪರೀಕ್ಷೆಯನ್ನು ಇಂಗ್ಲಿಷ್ ಭಾಷೆಯಲ್ಲಿ ಅಥವಾ ಕನ್ನಡ ಭಾಷೆಯಲ್ಲಿ ಉತ್ತರಿಸತಕ್ಕದ್ದು.

(8) ವಸತಿಶಾಲೆಯಲ್ಲಿ ಅನುಸರಿಸಬೇಕಾದ ಪಠ್ಯ ಕ್ರಮವು (ಸಿಲಬಸ್) ಕಾಲಕಾಲಕ್ಕೆ ಶಿಕ್ಷಣ ಇಲಾಖೆಯಿಂದ ಅನುಮೋದಿತವಾಗುವ ಪಠ್ಯಕ್ರಮದಂತೆಯೇ ಇರುತ್ತದೆ.

(9) ವಸತಿಶಾಲೆಯಲ್ಲಿ ಬೋಧನಾ ಮಾಧ್ಯಮವು ಇಂಗ್ಲೀಷ್ ಆಗಿರುತ್ತದೆ.

(10) ವಸತಿಶಾಲೆಗೆ ಪ್ರವೇಶ ಪಡೆಯಬಯಸುವ ವಿದ್ಯಾರ್ಥಿಗಳು ಪ್ರವೇಶ ಪರೀಕ್ಷೆಗೆ ಅನುಬಂಧದಲ್ಲಿ ನಿಗದಿತವಾಗಿರುವ ನಮೂನೆಯಲ್ಲಿ ಅರ್ಜಿಗಳನ್ನು ಸಲ್ಲಿಸತಕ್ಕದ್ದು.

(11) ಹಿಂದುಳಿದ ಬುಡಕಟ್ಟಿಗೆ (ಎ ಗುಂಪು) ಸೇರಿದ ವಿದ್ಯಾರ್ಥಿಗಳಿಗೆ ಆದಾಯ ಮಿತಿ ಅನ್ವಯಿಸುವುದಿಲ್ಲ.

(12) ಈ ವಸತಿ ಶಾಲೆಗಳು 5 ರಿಂದ 10ನೇ ತರಗತಿಯವರೆಗೆ ಎಲ್ಲಾ ಅರ್ಹ ಗ್ರಾಮೀಣ ವಿದ್ಯಾರ್ಥಿಗಳಿಗೆ ಮಾತ್ರ ಸೀಮಿತವಾಗುತಕ್ಕದ್ದು. ಪಟ್ಟಣ ಪ್ರದೇಶದಲ್ಲಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಈ ವಸತಿ ಶಾಲೆಯಲ್ಲಿ ಸೇರಲು ಅವಕಾಶ ಇರುವುದಿಲ್ಲ. ಗ್ರಾಮೀಣ ಪ್ರದೇಶವೆಂದರೆ 10 ಸಾವಿರ ಜನಸಂಖ್ಯೆಗೆ ಕಡಿಮೆ ಇರುವ ಗ್ರಾಮದಿಂದ ಬಂದ ವಿದ್ಯಾರ್ಥಿಗಳಿಗೆ ಅವಕಾಶವಿರುತ್ತದೆ.

(13) ವಸತಿಶಾಲೆಗೆ ಪ್ರವೇಶವು ಆ ವಸತಿ ಶಾಲೆಯು ಸ್ಥಾಪಿತವಾಗಿರುವ ರೆವಿನ್ಯೂ ವಿಭಾಗದ ಜಿಲ್ಲೆಗಳ ವಿದ್ಯಾರ್ಥಿಗಳಿಗೆ ಮಾತ್ರ ನಿರ್ಬಂಧಿತವಾಗಿದೆ.

ಅರ್ಜಿಯನ್ನು ಸಲ್ಲಿಸುವ ವಿಧಾನ:

(1) ವಸತಿಶಾಲೆಗೆ ಪ್ರವೇಶ ಬಯಸುವ ವಿದ್ಯಾರ್ಥಿಗಳಿಗೆ ಪ್ರವೇಶಪರೀಕ್ಷೆ ಪಡೆಯುವ ಸಾಲಿನ ಪ್ರತಿ ಹಿಂದಿನ ವರ್ಷದ ನವೆಂಬರ ಮಾಹೆಯಲ್ಲಿ ವಸತಿ ಶಾಲೆಯಿರುವ ಜಿಲ್ಲಾ ಹಿಂದುಳಿದ ವರ್ಗಗಳ ಅಧಿಕಾರಿಗಳಿಗೆ ಮುಂದಿನ ವರ್ಷಕ್ಕೆ ಪ್ರವೇಶಕ್ಕಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದು.

(2) ಪ್ರವೇಶ ಬಯಸುವ ಗ್ರಾಮೀಣ ವಿದ್ಯಾರ್ಥಿಗಳು ಈ ಕೆಳಕಂಡ ದಾಖಲೆಗಳ ಸಹಿತ ಪ್ರವೇಶದ ಅರ್ಜಿಯನ್ನು ಜಿಲ್ಲಾ ಹಿಂದುಳಿದ ವರ್ಗಗಳ ಅಧಿಕಾರಿಗಳವರಿಗೆ ಸಲ್ಲಿಸತಕ್ಕದ್ದು:–

(ಅ) ಕಂದಾಯ ಇಲಾಖೆಯ ತಹಶೀಲ್ದಾರರವರಿಂದ ಜಾತಿ – ಆದಾಯದ ಮತ್ತು ಗ್ರಾಮೀಣ ಪ್ರದೇಶಕ್ಕೆ ಸೇರಿದವರು ಎಂಬ ಬಗ್ಗೆ ನಿಗದಿತ ನಮೂನೆಯಲ್ಲಿ ಜಾತಿ – ಆದಾಯ ಮತ್ತು ಗ್ರಾಮೀಣ ಪ್ರದೇಶದ ಸತ್ಯಪರಿಶೋಧನಾ ಪ್ರಮಾಣ ಪತ್ರ.

(ಆ) 4ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಬಗ್ಗೆ ಪ್ರಮಾಣ ಪತ್ರವನ್ನು ಸಂಬಂಧಿಸಿದ ಶಾಲೆಯ ಮುಖ್ಯೋಪಾಧ್ಯಾಯರಿಂದ ದೃಢೀಕರಿಸಬೇಕು. ಮುಖ್ಯೋಪಾಧ್ಯಾಯರು ವಸತಿಶಾಲೆಗೆ ಸೇರುವ ವಿದ್ಯಾರ್ಥಿಗಳು ಗ್ರಾಮೀಣ ಪ್ರದೇಶಕ್ಕೆ ಸೇರಿದವಿದ್ಯಾರ್ಥಿಗಳೆಂದು ದೃಢೀಕರಿಸತಕ್ಕದ್ದು.

(ಇ) ವಿದ್ಯಾರ್ಥಿಯ ವಯಸ್ಸು 10 ರಿಂದ 12 ವರ್ಷದ ಒಳಗೆ ಇದೆ ಎಂಬುದಕ್ಕೆ ಶಾಲೆಯ ಮುಖ್ಯೋಪಾಧ್ಯಾಯರಿಂದ ದೃಢೀಕರಣ ಪತ್ರ.

(3) ಈ ಶಾಲೆಗಳಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳು ಅರ್ಹತಾ ವಿದ್ಯಾರ್ಥಿವೇತನದ ಹೊರತು ಇತರೇ ಯಾವುದೇ ವಿದ್ಯಾರ್ಥಿವೇತನಕ್ಕೆ ಅರ್ಹರಲ್ಲ.

... 3.

56



4) ಅವಧಿ:

(ಅ) ಈ ವಸತಿನಿಲಯವು ಜೂನ್ 1ನೇ ತಾರೀಖಿನಿಂದ ಪ್ರಾರಂಭಗೊಂಡು ಪರೀಕ್ಷೆಗಳು ಮುಗಿಯುವವರೆಗೆ ನಡೆಯುತ್ತದೆ. ವಿದ್ಯಾರ್ಥಿಯು ವ್ಯಾಸಂಗ ಮಾಡುತ್ತಿರುವ ತರಗತಿಯಲ್ಲಿ ಅನುತ್ತೀರ್ಣನಾದಲ್ಲಿ ವಸತಿ ಶಾಲೆಯಲ್ಲಿ ಮುಂದುವರೆಯಲು ಒಂದು ಶೈಕ್ಷಣಿಕ ಅವಧಿಗೆ ಅವಕಾಶವಿರುವುದು.

(ಆ) ಪ್ರಾಂಶುಪಾಲರ ಪೂರ್ವಾನುಮತಿ ಇಲ್ಲದೆ ಹಾಗೂ ಸಕಾರಣವಿಲ್ಲದೆ ವಸತಿ ಶಾಲೆಯಲ್ಲಿ ಗೈರು ಹಾಜರಾಗುವ ವಿದ್ಯಾರ್ಥಿಗಳನ್ನು ಮುನ್ಸೂಚನೆಯಿಲ್ಲದೆ ಶಾಲೆಯಿಂದ ತೆಗೆದುಹಾಕಲಾಗುತ್ತದೆ.

(5) ವಸತಿ ಶಾಲೆಗೆ ಪ್ರವೇಶ ಪಡೆದ ವಿದ್ಯಾರ್ಥಿಗಳು ಶಿಸ್ತನ್ನು ಪಾಲಿಸತಕ್ಕದ್ದು. ಶಿಸ್ತನ್ನು ಪಾಲಿಸದಿದ್ದ ಮತ್ತು ಗಲಭೆಯಲ್ಲಿ ತೊಡಗುವ ವಿದ್ಯಾರ್ಥಿಗಳನ್ನು ವಸತಿನಿಲಯದ ಅಧ್ಯಕ್ಷರ ಒಪ್ಪಿಗೆ ಪಡೆದು ಸೂಚನೆ ರಹಿತವಾಗಿ ವಸತಿನಿಲಯದಿಂದ ತೆಗೆದುಹಾಕತಕ್ಕದ್ದು

(6) ವಸತಿಶಾಲೆಗೆ ಪ್ರವೇಶ ಪಡೆದ ವಿದ್ಯಾರ್ಥಿಗಳು 150—00 ರೂ.ಗಳನ್ನು ಅಥವಾ ಸರ್ಕಾರ ನಿಗದಿ ಮಾಡುವ ಮೊತ್ತವನ್ನು ಎಚ್ಚರಿಕೆ ಹಣವಾಗಿ ಕಟ್ಟತಕ್ಕದ್ದು. ಈ ಹಣದಲ್ಲಿ ವಿದ್ಯಾರ್ಥಿಗಳಿಂದ ಬರಬೇಕಾದ ಬಾಕಿ ಇದ್ದಲ್ಲಿ ಅದನ್ನು ಕಳೆದು ಉಳಿಕೆ ಹಣವನ್ನು ಅವರು ವಸತಿ ಶಾಲೆ ಬಿಡುವಾಗ ಹಿಂದಿರುಗಿಸಲಾಗುವುದು.

(7) ಈ ವಸತಿ ಶಾಲೆಗೆ ಪ್ರವೇಶ ಪರೀಕ್ಷೆಯಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಪ್ರವೇಶ ಪರೀಕ್ಷೆಯ ಅರ್ಹತೆಯ ಮೇಲೆ ವಸತಿ ಶಾಲೆ ಪ್ರವೇಶ ಸಮಿತಿಯ ಅನುಮೋದನೆಯೊಂದಿಗೆ ವಿದ್ಯಾರ್ಥಿಗಳಿಗೆ ಪ್ರವೇಶ ಕೊಡಲಾಗುವುದು.

ಸಹಿ,
(ಎಸ್. ಕೆ. ಶ್ರೀಕಂಠಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಇಲಾಖೆ.

:: ನಕಲು ::

ನಿರ್ದೇಶಕರ ಪರವಾಗಿ
ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ
ಇಲಾಖೆ, ಬೆಂಗಳೂರು.